''ನಾಳೆಯಿಂದ ನಿಮ್ಮ ದೇಹವನ್ನು ನನಗೆ ಕೊಡಿ... ಕೇವಲ ಏಳು ದಿನಗಳಲ್ಲಿ ಅದರಲ್ಲಿರುವ ಬೆಂಕಿಯನ್ನು ನಾನು ಹೊರತೆಗೆಯುತ್ತೇನೆ. ಬೆಳೆಸುತ್ತೇನೆ.''

''ಏನು ಮಾಡುವಿರಿ ಎಂದು ನಾನು ತಿಳಿದುಕೊಳ್ಳಬಹುದೇ? ಯಾಕೆಂದರೆ ನಾನು ರಸಾಯನಗಳನ್ನೋ ಮಾಂಸದ ಆಹಾರಗಳನ್ನೋ ಉಣ್ಣಲು ಬಯಸುವುದಿಲ್ಲ.''

''ಅವು ಯಾವುದೂ ಬೇಕಿಲ್ಲ... ನನ್ನ ದಾರಿಗಳೇ ಬೇರೆ...'' ಭೈರಾಗಿ ಹೇಳಿದರು. ''ಒಂದು ನಂದಿಹೋಗುವ ಅಗ್ನಿಕುಂಡವನ್ನು ಜೀವಂತಗೊಳಿಸುವುದನ್ನೇ ನಾನು ಮಾಡುವುದು.''

ಬಾಪೂ ನೋಡುತ್ತಿದ್ದರು.

''ಅಗ್ನಿಯೇ ಸ್ವೀಕರಿಸು! ಅಗ್ನಿಯೇ ಎದ್ದೇಳು!'' ಎಂದರು ಭೈರಾಗಿ ಸಂಸ್ಕೃತದಲ್ಲಿ. ಎತ್ತರದ ದನಿಯಲ್ಲಿ, ಮಂತ್ರ ಘೋಷವಿಡುವಂತೆ, ''ವೇದಗಳು ಅದನ್ನೇ ಹೇಳುತ್ತವೆ. ಅಗ್ನಿ ನಿಜವಾಗಲೂ ಆಹುತಿ ತೆಗೆದುಕೊಳ್ಳುವುದು ಯಾವುದನ್ನು? ಆ ಯಜ್ಞಕುಂಡವನ್ನೇ ಉಣ್ಣುತ್ತದೆ; ಯಾವುದನ್ನೂ ತನ್ನೊಂದಿಗೆ ಇಟ್ಟುಕೊಳ್ಳುವುದಿಲ್ಲ. ತನ್ನೊಳಗೆ ಬೀಳುವ ಸಕಲವನ್ನೂ ಅದು ಪುನಃ ಪೂರ್ವ ಆಕಾರಕ್ಕೆ ಮರಳಿ ತರುತ್ತದೆ... ಮತ್ತೆ ಬಾಹ್ಯಾಕಾಶದಲ್ಲಿ ಸಮ್ಮಿಲನಗೊಳಿಸುತ್ತದೆ.''

ತೂಗುದೀಪದ ಬೆಳಕಿನ ಪ್ರಕಾಶದಲ್ಲಿ ಭೈರಾಗಿಯ ಕಣ್ಣುಗಳು ಎರಡು ಸಣ್ಣ ಜ್ವಾಲೆಗಳಂತೆ ಬೆಳಗಿದವು. ''ನಾನು ನಿಮಗೆ ಕಲಿಸಿಕೊಡುವುದು ಕೆಲವು ಮಂತ್ರಗಳನ್ನಷ್ಟೇ. ಆ ಮಂತ್ರಗಳಿಗೆ ಶಕ್ತಿ ತುಂಬಲು ಕೆಲವು ಆಹಾರಗಳು... ಅಗ್ನಿಗೆ ಪ್ರಿಯವಾದ ಕೆಲವು ಆಹಾರಗಳು... ಅಷ್ಟೇ. ನಾಳೆ ಬೆಳಗ್ಗೆ ನೋಡೋಣ.''

ಭೈರಾಗಿ ಹಿಂತಿರುಗಿದಮೇಲೆ ಬಾಪೂ ಸಣ್ಣ ದನಿಯಲ್ಲಿ, ''ಮಹಾರಾಜ್'' ಎಂದರು. ಭೈರಾಗಿ ಹಿಂದೆ ತಿರುಗಿ ನೋಡಿದರು.

''ಈ ದೇಶವೂ ನನ್ನಂತೆಯೇ ಬಿದ್ದುಕೊಂಡಿದೆ. ಮರಣದ ಅಂಚಿನಲ್ಲಿ... ಅದನ್ನು ಅಳಿಯದಂತೆ ಉಳಿಸಬೇಕೆಂಬ ಒಂದು ಸಣ್ಣ ತವಕವಷ್ಟೆ. ಅಥವಾ ಒಂದು ಮಂಕಾದ ಕನಸು.''

